# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ತಾರಾ | P.W | 12 |
| ಗಂಡನ ಹೆಸರು | ದೊಡ್ಡಯ್ಯ | C.W | 30 |
| ವಯಸ್ಸು | 35 ವರ್ಷ | | |
| ಉದ್ಯೋಗ | ವ್ಯವಸಾಯ | ಪ್ರ.ವ.ಬೋ | |
| ವಾಸಸ್ಥಳ | ರಾಮೇನಹಳ್ಳಿ ಗ್ರಾಮ, ಸಕಲೇಶಪುರ | ದಿನಾಂಕಃ 24.11.2022 | |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನನಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಾನು ಯಾವುದೇ ಹಣವನ್ನು ಕಳೆದುಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ

2008-09 ನೇ ಇಸವಿಯಲ್ಲಿ ಇಂದಿರಾ ಆವಾಜ್ ಯೋಜನೆಯಲ್ಲಿ ನನಗೆ ಮನೆ ಮಂಜೂರಾಗಿತ್ತು ಎಂದರೆ ಸರಿ. ನನ್ನಂತೆಯೇ ಚಾಸಾ **24** ರಿಂದ **29** ರವರಿಗೆ ಸಹಾ ಹಣ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ**.** ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸದರಿ ವಿಷಯವನ್ನು ನನಗೆ ತಿಳಿಸಿ ದಿಃ 26-07-2009 ರಂದು ರೂ. 8 ಸಾವಿರಕ್ಕೆ ಚೆಕ್ಕನ್ನು ನೀಡಿ ಅದನ್ನು ಬ್ಯಾಂಕ್ ನಲ್ಲಿ ತೆಗೆದುಕೊ ಎಂದು ಹೇಳಿದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ನಾನೇ ಬ್ಯಾಂಕ್ ನಲ್ಲಿ ಹಣ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಮೋಹನ್ ರಾಜ್ ಎಂಬಾತ ಪಂಚಾಯ್ತಿಯ ಕರ ವಸೂಲಿಗಾರನಾಗಿ ಕೆಲಸ ಮಾಡುತ್ತಿದ್ದು, ನಾನು ಆತನ ಮೇಲೆ ನಂಬಿಕ ಇಟ್ಟು ಸದರಿ ಚೆಕ್ಕನ್ನು ಆತನಿಗೆ ಬ್ಯಾಂಕ್ ನಿಂದ ಹಣ ಪಡೆದುಕೊಂಡು ತಂದು ನನಗೆ ಕೊಡಲು ನೀಡಿದ್ದೆನು ಎಂದರೆ ಸರಿಯಲ್ಲ.

ಆತ ನನಗೆ ಎರಡು ತಿಂಗಳಾದರೂ ಹಣ ನೀಡದ ಕಾರಣ , ನಾನು ವಿಚಾರಿಸಿದಾಗ ಆರೋಪಿಯು ಯಾರಿಗೂ ಹೇಳಬೇಡ ನಾನು ಹಣವನ್ನು ನನ್ನ ಸ್ವಂತಕ್ಕೆ ಬಳಸಿಕೊಂಡಿದ್ದೇನೆ ಎಂದು ಹೇಳಿದರು ಎಂದರೆ ಸರಿಯಲ್ಲ. ಆದರೆ ಆತ ನನಗೆ ಇದುವರೆಗೂ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಂತರ ಆರೋಪಿಯು ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿಗಳನ್ನು ಫೋರ್ಜರಿ ಮಾಡಿ ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ನನಗೆ ತಿಳಿಯಿತು ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ವಿಚಾರಿಸಿದಾಗ , ಆತ ತನ್ನ ತಪ್ಪನ್ನು ಒಪ್ಪಿಕೊಂಡು ಸದರಿಯವರ ಸಹಿ ಮತ್ತು ಸೀಲನ್ನು ತಾನೇ ಹಾಕಿ ಹಣವನ್ನು ಡ್ರಾ ಮಾಡಿರುವುದು ನಿಜ ಎಂದು ಒಪ್ಪಿಕೊಂಡನು ಎಂದರೆ ಸರಿಯಲ್ಲ . ಆರೋಪಿಯು ಇದೇ ರೀತಿ ಸುಮಾರು 3-4 ಜನರಿಗೆ ವಂಚಿಸಿ , ನಂಬಿಸಿ ಮೋಸ ಮಾಡಿರುವುದು ತಿಳಿಯಿತು ಎಂದರೆ ಸರಿಯಲ್ಲ.

ಆಗ ಆರೋಪಿಯು ಇದೇ ರೀತಿ ಯಾರದ್ದೋ ಹೆಸರಿನ ಚೆಕ್ಕುಗಳನ್ನು ತೆಗೆದುಕೊಂಡು ಸದರಿ ಚೆಕ್ ಗೆ ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರು ಸೀಲು ಹಾಕಿಕೊಂಡು ನಕಲಿ ಸಹಿ ಮಾಡಿ ಹಣವನ್ನು ಪಡೆಯುತ್ತಿದ್ದ ಬಗ್ಗೆ ನನಗೆ ತಿಳಿಯಿತು ಎಂದರೆ ಸರಿ. ಇದರ ಕುರಿತಂತೆ ನಾನು ದಿಃ **10-02-2013** ರಂದು ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನೂ ಸಹ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ **62** ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಇಲ್ಲ

ಮರುವಿಚಾರಣೆಃ- ಇಲ್ಲ
ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.